3) ಉದಿಷಾ–ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಯೋಜನೆ	280.00	246.63	100.00	29.13
4) ಮಾದರಿ ಅಂಗನವಾಡಿ ಕಟ್ಟಡಗಳ ನಿರ್ಮಾಣ	500.00	500.00	–	–
5) ಕಿಶೋರಿಶಕ್ತಿ ಯೋಜನೆ *	–	20.81	–	–
6) ಬಾಲಿಕಾ ಸಮೃದ್ಧಿ ಯೋಜನೆ **	490.36	–	–	45.00
7) ಎ ಪ್ರೋಗ್ರಾಂ ಫಾರ್ ಜುವೆನೈಲ್ ಜಸ್ಟೀಸ್	50.31	72.62	–	13.80
8) ಸ್ವಯಂ ಸಿದ್ಧ ***	25.22	70.59	50.00	–

* ಈ ಯೋಜನೆಗೆ ಪ್ರತ್ಯೇಕ ಅನುದಾನ ಬಿಡುಗಡೆಯಾಗಿರುವುದಿಲ್ಲ. ಕ್ರಮ ಸಂಖ್ಯೆ(1) ಅನುದಾನದಲ್ಲಿ ಖರ್ಚನ್ನು ಭರಿಸಲಾಗುತ್ತಿದೆ.

** 2004–05ನೇ ಸಾಲಿನ ವರ್ಷ್ಯಾಂತ್ಯದಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿದ್ದು ಇದನ್ನು 2005–06ನೇ ಸಾಲಿನಲ್ಲಿ ಖರ್ಚು ಮಾಡಲಾಗುತ್ತಿದೆ.

*** ಅನುದಾನ ರಾಜ್ಯ ಸರ್ಕಾರದಿಂದ ಬಿಡುಗಡೆ ಹಂತದಲ್ಲಿದೆ.

5599(6537) : ಶ್ರೀ ನಾಗರಾಜಯ್ಯ ಡಿ. (ಹುಲಿಯೂರ್ ದುರ್ಗ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರಾಟ ಇಲಾಖೆಯು ಪ್ರಾರಂಭವಾದಾಗಿನಿಂದ ಬೆರಳಚ್ಚುಗಾರರಿಗೆ ಪದೋನ್ನತಿ ನೀಡಲಾಗಿದೆಯೇ?

ಆ) ನೀಡಿದ್ದಲ್ಲಿ ವಿವರಗಳೇನು?

ಇ) ಪ್ರಸ್ತುತ ಪದೋನ್ನತಿ ನೀಡದೆ ವಂಚಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ ನೌಕರರಿಗೆ ಅನ್ಯಾಯವಾಗುವುದಿಲ್ಲವೇ?

ಈ) ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕಾರಿ ಆದೇಶದ ಪ್ರಕಾರ ಎಲ್ಲಾ ವೃಂದದ ಸಿಬ್ಬಂದಿಗಳಿಗೂ ಪದೋನ್ನತಿಯನ್ನು ನೀಡುತ್ತಿರುವಾಗ ಬಂದಿರುವ ದೂರುಗಳ ಆಧಾರದ ಮೇಲೆ ಕೇವಲ ಬೆರಳಚ್ಚುಗಾರರ ಪದೋನ್ನತಿಯನ್ನು ಮಾತ್ರ ತಡೆಹಿಡಿಯಬೇಕೆಂದು ಸರ್ಕಾರವು ತಮ್ಮ ಪತ್ರ ಸಂಖ್ಯೆ: ಸಸಿ:49:ಮಾಇಸೇ: 2005 ದಿನಾಂಕ: 1/7/2005ರಲ್ಲಿ ಸೂಚಿಸಿರುವುದು ನಿಜವೇ? ಇವರ ಪದೋನ್ನತಿಯು ಮಾತ್ರ ಕಾನೂನು ಬಾಹಿರ ಹೇಗಾಗುತ್ತದೆ?

ಉ) ಕೃಷಿ ಮಾರಾಟ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆರಳಚ್ಚುಗಾರರಿಗೆ ಕಾರ್ಯಕಾರಿ ಆದೇಶದಲ್ಲಿ ಪ್ರಥಮ ದರ್ಜೆ ಸಹಾಯಕರಿಗೆ ನಿಗದಿಪಡಿಸಿರುವ ಎಲ್ಲಾ ಅರ್ಹತೆ ಇದ್ದರೂ ಸಹ ಪ್ರಥಮ ದರ್ಜೆ ಸಹಾಯಕರ ಪದೋನ್ನತಿಗೆ ಇವರನ್ನು ಪರಿಗಣಿಸದಿರಲು ಕಾರಣಗಳೇನು?

ಊ) ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 252 ದ್ವಿತೀಯ ದರ್ಜೆ ಸಹಾಯಕರು ಹಾಗೂ 202 ಇಲಾಖೆಯ ಕರಡು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಥಮ ದರ್ಜೆ ಸಹಾಯಕರ ಪದವೃಂದಕ್ಕೆ ಪದೋನ್ನತಿ ಹೊಂದುವಾಗ 10:1 ಅನುಪಾತವನ್ನು ಅನುಸರಿಸುತ್ತಿರುವುದು ಸರಿಯೇ?

ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಹೌದು.

ಆ) ದಿನಾಂಕ 30.10.1975ರ ಸರ್ಕಾರಿ ಕಾರ್ಯಕಾರಿ ಆದೇಶದ ಸಂಖ್ಯೆ: ಆರ್.ಡಿ.ಸಿ./100/ಸಿಎಂಡಿ/74 ರನ್ವಯ ಈವರೆಗೆ ಬೆರಳಚ್ಚುಗಾರರ ಪದವೃಂದದಿಂದ 185 ನೌಕರರುಗಳಿಗೆ ಪ್ರಥಮ ದರ್ಜೆ ಸಹಾಯಕರ ಪದವೃಂದಕ್ಕೆ ಪದೋನ್ನತಿ ನೀಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲಾಖೆಯಲ್ಲಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಲು ಕ್ರಮ ವಹಿಸಿರುವುದರಿಂದ ನಿಯಮಗಳನುಸಾರ ಪದೋನ್ನತಿ ನೀಡುವ ಬಗ್ಗೆ ಕ್ರಮ ವಹಿಸಲಾಗುವುದು. ಈ ಮಧ್ಯಂತರ ಅವಧಿಯಲ್ಲಿ ಪದೋನ್ನತಿಗಳನ್ನು ನೀಡಲಾಗುತ್ತಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಳ್ಳಲು ಕ್ರಮ ಜರುಗಿಸಲಾಗಿದೆ.

5600(6332) : ಶ್ರೀ ಪದ್ಮನಾಭ ಕೊಟ್ಟಾರಿ.ಕೆ. (ವಿಟ್ಲ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಪಿಎಲ್ ಪಡಿತರ ಕಾರ್ಡ್‌ಗಳ ಫಲಾನುಭವಿಗಳ ಗುರುತಿಸುವಿಕೆಯ ಕಾರ್ಯವು ಮುಕ್ತಾಯಗೊಂಡಿದೆಯೇ; (ವಿವರ ನೀಡುವುದು);

ಆ) ವಿಟ್ಲ ಕ್ಷೇತ್ರದಲ್ಲಿ ಎಷ್ಟು ಜನರಿಗೆ ಬಿ.ಪಿ.ಎಲ್. ಕಾರ್ಡ್‌ಗಳನ್ನು ಹಂಚಲಾಗಿದೆ;

ಇ) ಸರ್ವೇ ಕಾರ್ಯ ನಂತರ ನೀಡುವ ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ಗಳನ್ನು ಹೊಸದಾಗಿ ಹಂಚಲಾಗುವುದೇ;

ಈ) ಬಡವರಿಗೆ ಪಡಿತರ ಕಾರ್ಡ್‌ಗಳನ್ನು ಹಂಚುವ ಕಾರ್ಯದಲ್ಲಿ ವಿಳಂಬ ತಡೆಗಟ್ಟಲು ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಬಿಪಿಎಲ್ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಮುಕ್ತಾಯ ಹಂತದಲ್ಲಿದ್ದು, ಗ್ರಾಮ ಸಭೆಗಳಲ್ಲಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗೆ ಮಂಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಆ) ವಿಟ್ಲ ಕ್ಷೇತ್ರದಲ್ಲಿ ಜೂನ್, 2005ರ ಅಂತ್ಯಕ್ಕೆ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ವಿವರಗಳು ಕೆಳಕಂಡಂತಿರುತ್ತದೆ.

ಎ.ಎ.ವೈ	–	1604
ಹಳದಿ ಪ.ಚೀ.	–	15706
ಒಟ್ಟು	–	17310